ಪ್ರಬಂಧ ಸ್ಪರ್ಧೆ

ಮೆಚ್ಚುಗೆ ಪಡೆದ ಪ್ರಬಂಧ

◆ ವಿಜಯಶ್ರೀ ಎಂ. ಹಾಲಾಡಿ

ಕಲೆ: ಸಂತೋಷ್ ಸಸಿಹಿತ್ಲು

# ಸ್ಟೋರ್ ರೂಂ– ಅಟ್ಟ ಎಂಬ ಮೂಲೆಗಳು



ನನಗೆ ಆಶ್ಚರ್ಯವಾಗುವುದೆಂದರೆ, ಕೆಲವು ಇಷ್ಟಗಳು 'ಯಾಕೆ ಇಷ್ಟ' ಎಂದು ಅರ್ಥವಾಗದಿರುವುದು! ಒಂದು ವೇಳೆ ಅರ್ಥ ಮಾಡಿಕೊಳ್ಳಲು; ಎಳೆ ಎಳೆಯಾಗಿ ಬಿಡಿಸಿ ನೋಡಲು ಪ್ರಯತ್ನಿಸಿದರೂ ಅದರಿಂದಾಚೆಗೆ ಏನೋ ಉಳಿದುಬಿಡುವುದು! ಈ ಸ್ಟೋರ್ ರೂಂ ಮತ್ತು ಅಟ್ಟಗಳ ವಿಷಯವೂ ಹೀಗೇ... ಅಟ್ಟ ಎಂಬ ಹೆಸರೇ ಕಿವಿಗೆ ಹಿತ. ಈ ಪದವನ್ನು ಕೇಳಿದೊಡನೆ ಅಡು (ಅಡುಗೆ ಮಾಡುವುದು), ಅಡಕಿರಿ (ಒತ್ತೊತ್ತಿಗೆ ತುಂಬುವುದು) ಎಂಬೆರಡು ಶಬ್ದಗಳು ಫಕ್ಕನೆ ಚಿತ್ರವತ್ತಾಗಿ ನೆನಪಿಗೆ ಬರುತ್ತವೆ.

ಸ್ಟೋರ್ ರೂಂ ಎಂಬ ಇಂಗ್ಲಿಷ್ ಪದವನ್ನು ಮೊದಲೆಲ್ಲ ಬಳಸುತ್ತಿರಲಿಲ್ಲ. ಆದರೆ ಈಗ ಅದಲ್ಲದೆ ಬೇರೆ ಯಾವುದೂ ನಾಲಗೆಗೆ ಬರುತ್ತಲೇ ಇಲ್ಲ! ಆಗೆಲ್ಲ ಮನೆಯ ಒಂದೊಂದು ಕೋಣೆಗಳಿಗೆ ಒಂದೊಂದು ಹೆಸರಿರುತ್ತಿತ್ತು. ಅದರದರ ಸ್ವಭಾವ, ಉಪಯೋಗಗಳಿಗೆ ಅನುಗುಣವಾಗಿ ಆಯಾಯ ಕೋಣೆಗಳಿಗೆ ನಾಮಕರಣ. ಹೆಚ್ಚಿನ ಮತ್ತು ಅನಗತ್ಯ ವಸ್ತುಗಳನ್ನು ಇಡುವ ಕೋಣೆಗಳು ಮರೆಯಲ್ಲಿರುತ್ತಿದ್ದುದರಿಂದ ಮುಲ್ಲೆಕೋಣೆ, ಆಚೆ ಒಳ, ಸಣ್‌ಕೋಣೆ, ಕಡ್ ಮಾಡ್ ಮುಂತಾದ ಏನೋ ಒಂದು ಹೆಸರನ್ನು ಧರಿಸಿರುತ್ತಿದ್ದವು. ಇದನ್ನೆಲ್ಲ ಆಲೋಚಿಸುತ್ತಿದ್ದಂತೆ 'ಸ್ಟೋರ್ ರೂಂ' ಎಂಬ ಪರಿಕಲ್ಪನೆ ಪೂರ್ಣವಾಗಿ ನಮ್ಮ ದೇಶದ್ದಲ್ಲವೇನೋ ಎಂಬ ಅನುಮಾನ ನನಗೆ ಬರುತ್ತಿದೆ. ಕಣ, ತಿರಿ, ಅಕ್ಕಿಮುಡಿ, ಹುಲ್‌ಲ್‌ಕುತ್ರಿ ಮುಂತಾದವು ಬೇರೆ ಬೇರೆ ವಸ್ತುಗಳ ಸಂಗ್ರಹದ ಜಾಗವೇ ಹೌದಾದರೂ 'ಸ್ಟೋರ್ ರೂಂ' ಸೂಚಿಸುವ ಪದ ನೆನಪಾಗುತ್ತಿಲ್ಲ. ಆದರೆ, ಪ್ರತಿ ಮನೆಯಲ್ಲೂ ಒಂದೊಂದು ಕೋಣೆಗೂ ವಿಶಿಷ್ಟ ಹೆಸರಿರುತ್ತಿತ್ತು. ಆದರೆ ಈಗ ಹೊಸ ಕನ್ನಡ ಪದವನ್ನು ಟಂಕಿಸಲು ನಮಗೆ ಆಸಕ್ತಿಯೇ ಇಲ್ಲವೆನಿಸುತ್ತದೆ! ಹಾಗೆ ಮನೆಗೆ ಸಂಬಂಧಿಸಿದ ಬೇರೆ ಬೇರೆ ಭಾಗಗಳಿಗೂ ಅಂದರೆ ಗದ್ದೆ, ತೋಟ, ಕಾಡು, ಕಾಡಿನ ವಿವಿಧ ಭಾಗಗಳಿಗೆ ಅನ್ವರ್ಥಕವಾದ ಹೆಸರುಗಳನ್ನು ಇಟ್ಟುಕೊಳ್ಳುತ್ತಿದ್ದರು. ಉದಾಹರಣೆಗೆ ದರೆಮನೆ, ಹಾಳ್ಮನೆ, ಹಕ್ಲ್, ಮೂರ್ಮುಡಿ, ಐವತ್ತನೆ, ಎರಡ್ಮುಡಿ ಹೀಗೆ...

ಹಳೆಯ ಪಾತ್ರೆ ಪಗಡಗಳು, ದೊಡ್ಡ ದೊಡ್ಡ ಸಂಗ್ರಹ ಡಬ್ಬಗಳು, ಉಪ್ಪಿನಕಾಯಿ ಜಾಡಿಗಳು, ಉಪ್ಪಿಗೆ ಹಾಕಿದ ಹಲಸಿನಕಾಯಿ, ಮಾವಿನಕಾಯಿಯ ಬಾಣೆಗಳು, ಸುಲಿಯದ; ಸುಲಿದ ತೆಂಗಿನಕಾಯಿಯ ರಾಶಿ, ಪೊರಕೆಗಳು, ಅಕ್ಕಿ ಮುಡಿಗಳು ಹೀಗೆ ಏನೇನೋ ಹೆಚ್ಚಿನ ಸಾಮಾನುಗಳು, ಅನಗತ್ಯ ಸರಕುಗಳನ್ನು ತುಂಬಿಕೊಂಡು, ನೀಟಾಗಿಲ್ಲದ ಸ್ಟೋರ್ ರೂಂ ಯಾಕೆ, ಹೇಗೆ ಇಷ್ಟವಾಗುತ್ತದೆ ಎಂಬ ಪ್ರಶ್ನೆ ನಿಮ್ಮಲ್ಲಿ ಹುಟ್ಟಿಕೊಳ್ಳಬಹುದು. ಹೌದು, ಇಂತಹ ಸ್ಟೋರ್ ರೂಂ ಯಾವ ರೀತಿಯಲ್ಲಿ ನನಗೆ ಆಪ್ತ ಎನ್ನುವುದನ್ನು ಹೇಳಬೇಕೆಂದು ಹೊರಟಿರುವೆ.

ನಾನು ಹುಟ್ಟಿ ಬೆಳೆದ ಮನೆಯಲ್ಲಿ ಸರಿಯಾಗಿ ಗಮನಿಸಿ ನೋಡಿದರೆ ಮೂರು ಸ್ಟೋರ್ ರೂಮುಗಳಿದ್ದವು. ಒಂದು ಬಯಲಿನಂತೆ ಕಂಡರೆ ಮತ್ತೆರಡು ತೀರಾ ಒಳಕೈಯ್ಯಲ್ಲಿ ಬಚ್ಚಿಟ್ಟುಕೊಂಡಿದ್ದವು. ನಮ್ಮನೆಯ ಸುತ್ತ ಗದ್ದೆಗಳು, ಹಾಡಿ, ಕಾಡುಗಳು, ತೋಟ, ತೋಡು. ಮನೆಯ ಎದುರು 'ಕೊಟ್ಟಿಗೆ' ಎಂದು ಕರೆಯುತ್ತಿದ್ದ ಜಾಗವಿತ್ತು. ಇದು ಗಂಟಿಗಳನ್ನು (ಜಾನುವಾರು) ಕಟ್ಟುವ ಕೊಟ್ಟಿಗೆಯಂತೂ ಅಲ್ಲ. ಈಗಿನ ಸಿಟೌಟ್ ಸ್ವರೂಪದ ಜಾಗ. ಇದರಲ್ಲಿ ಒರಳು ಇದ್ದು ಬತ್ತ ಕುಟ್ಟುವುದು, ಅಕ್ಕಿ ಗೇರುವುದು ಮುಂತಾದವೆಲ್ಲ ಇಲ್ಲೇ ನಡೆಯುತ್ತಿದ್ದುದರಿಂದ ಇದಕ್ಕೆ 'ಕೊಟ್ಟಿಗೆ' ಎಂಬ ಹೆಸರು ಬಂದಿರಬೇಕು. ಇದರಲ್ಲೊಂದು ಸಣ್ಣ ಅಟ್ಟವೂ ಇತ್ತು. ನೆಲದಲ್ಲಿ ಒಂದು ಬದಿಯಲ್ಲಿ ತೆಂಗಿನಕಾಯಿಗಳು ಮತ್ತು ಬೇಸಾಯಕ್ಕೆ ಸಂಬಂಧಿಸಿದ ಹಾರೆ, ಪಿಕಾಸೆ, ಸಬ್ಬಲ್, ಗರಗಸ ಮುಂತಾದ ಸಾಮಗ್ರಿಗಳು, ಬೀಸುವ ಕಲ್ಲು ಮುಂತಾದವು ಇದ್ದರೆ; ಉಳಿದ ಕಡೆ ಎರಡು ಬೆಂಚು ಹಾಕಿ ಕುಳಿತುಕೊಳ್ಳುವ ವ್ಯವಸ್ಥೆ ಮಾಡಿದ್ದೆವು. ವಿರಾಮವಿದ್ದಾಗ ಇಲ್ಲಿ ಕುಳಿತು ಹಿತ ಗಾಳಿಯಲ್ಲಿ ಬಯಲು, ಕಾಡುಗಳನ್ನು ನೋಡಬಹುದಿತ್ತು. ಹಪ್ಪಳ ಮಾಡುತ್ತಿದ್ದುದು ಈ ಕೊಟ್ಟಿಗೆಯಲ್ಲೇ. ಬೇಸಗೆಯ ಉರಿ ಸೆಕೆಯ ರಾತ್ರಿಗಳಲ್ಲಿ ಈ ಜಾಗ ತಣ್ಣಗೆ ಮಲಗಲು ಕೂಡಾ ಉಪಯೋಗವಾಗುತ್ತಿತ್ತು! ಮೇಲಿನ ಸಣ್ಣ ಅಟ್ಟದಲ್ಲೂ ಒಂದಷ್ಟು ಸಾಮಾನುಗಳನ್ನು ಸಂರಕ್ಷಿಸಿ ಇಡಲಾಗಿತ್ತು. ತೋಟದಲ್ಲಿ ಬಿದ್ದ ಹಣ್ಣಡಕೆಗಳನ್ನು ಹೆಕ್ಕಿ ತಂದು ಈ ಅಟ್ಟದಲ್ಲಿ ಹಾಕಿಡುವುದು ಅಜ್ಜಿಯ ಅಭ್ಯಾಸ. ರಾತ್ರಿ ಬಾಗಿಲ್ವಕ್ಕಿಗಳು (ಬಾವಲಿ) ಬಂದು ಅಡಕೆಯ ಸಿಪ್ಪೆಯನ್ನು ಜಗಿಜಗಿದು ಹಾಕಿ ಹೋಗುತ್ತಿದ್ದವು. ಬಂದದ್ದಕ್ಕೆ ಸಾಕ್ಷಿಯಾಗಿ ಕೊಟ್ಟಿಗೆಯ ನೆಲದ ಮೇಲೆ ಹಿಕ್ಕೆ! ಬೆಳಗ್ಗೆದ್ದು ಕಸಗುಡಿಸುವಾಗ ಅಮ್ಮ ಬಯ್ದರೆ, ಪುಟ್ಟ ಹುಡುಗಿಯಾದ ನನಗೆ ಬಾಗಿಲ್ವಕ್ಕಿಗಳ ಕುರಿತು ವಿಸ್ಮಯದ ಏನೇನೋ ಆಲೋಚನೆಗಳು!

ಮನೆಯ ಮತ್ತೊಂದು ಸ್ಟೋರ್ ರೂಂ ಎಂದರೆ 'ಆಚೆ ಒಳ'. ಇದು ಅತಿ ಸಣ್ಣ ಕೋಣೆ; ಹಳೆಮನೆ ಪಾಲಾಗುವಾಗ ಬಂದ ಭಾಗದಲ್ಲಿದೆ. ಇಲ್ಲಿ ಇಡೀ ವರ್ಷಕ್ಕೆ ಬೇಕಾಗುವ

ಸ್ಟೋರ್ ರೂಂ ಎಂಬ ಇಂಗ್ಲಿಷ್ ಪದವನ್ನು ಮೊದಲೆಲ್ಲ ಬಳಸುತ್ತಿರಲಿಲ್ಲ. ಆದರೆ ಈಗ ಅದಲ್ಲದೆ ಬೇರೆ ಯಾವುದೂ ನಾಲಗೆಗೆ ಬರುತ್ತಲೇ ಇಲ್ಲ. ಸ್ಟೋರ್ ರೂಂ ಎಂಬ ಪರಿಕಲ್ಪನೆ ಪೂರ್ಣವಾಗಿ ನಮ್ಮ ದೇಶದ್ದಲ್ಲವೇನೋ ಎಂಬ ಅನುಮಾನ ಬರುತ್ತಿದೆ.